# www.karunaduexams.com

ಕೆ.ಎ.ಎಸ್ (KAS) ಪ್ರಶ್ನೋತ್ತರಗಳು 10

www.karunaduexams.com

1. ದೇಶದ ಮೊದಲ ಚತುರ ಸಾರಿಗೆ ವ್ಯವಸ್ಥೆ (Intelligence Transport System)ಯನ್ನು ರಾಜ್ಯದ ಯಾವ ಜಿಲ್ಲೆಯಲ್ಲಿ ಜಾರಿಗೆ ತರಲಾಗಿದೆ?

   ಅ) ಬೆಳಗಾವಿ

   ಆ) ಮೈಸೂರು

   ಇ) ಧಾರಾವಾಡ

   ಈ) ಶಿವಮೊಗ್ಗ

   ಮೈಸೂರು

2. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

   I) ಮಂಗಳೂರು ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಘೋಷಿಸಲಾಗಿದೆ

   II) ಇದು ಐಎಸ್ಒ 9001-2001 ಮತ್ತು ಐಎಸ್ಒ 14001 ಪ್ರಮಾಣೀಕೃತ ವಿಮಾನ ನಿಲ್ದಾಣವಾಗಿದೆ.

   ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

   ಅ) ಹೇಳಿಕೆ ಒಂದು ಮಾತ್ರ

   ಆ) ಹೇಳಿಕೆ ಎರಡು ಮಾತ್ರ

   ಇ) ಎರಡು ಹೇಳಿಕೆ ಸರಿ

   ಈ) ಎರಡು ಹೇಳಿಕೆ ತಪ್ಪು

   ಎರಡು ಹೇಳಿಕೆ ಸರಿ

3. ರಾಜ್ಯದಲ್ಲಿ ನಿರಂತರ ಕರಾವಳಿ ತೀರಾ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯನ್ನು ಯಾವ ಹಣಕಾಸು ಸಂಸ್ಥೆಯ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ?

   ಅ) ವಿಶ್ವ ಬ್ಯಾಂಕ್

   ಆ) ಏಷ್ಯಾ ಅಭಿವೃದ್ಧಿ ಬ್ಯಾಂಕ್

   ಇ) ನಬಾರ್ಡ್

   ಈ) ಅಂತಾರಾಷ್ಟ್ರೀಯ ಹಣಕಾಸು ನಿಧಿ

   ಏಷ್ಯಾ ಅಭಿವೃದ್ಧಿ ಬ್ಯಾಂಕ್

4. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಸ್ಥಾಪಿತವಾದ ವರ್ಷ _________?

   ಅ) 1960

   ಆ) 1959

   ಇ) 1962

www.karunaduexams.com

ಈ) 1956

1959

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ರಾಜ್ಯ ಮಟ್ಟದ ಹಣಕಾಸು ಸಂಸ್ಥೆಯಾಗಿದ್ದು, 1951 ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆಯಡಿ 1959 ರಲ್ಲಿ ಸ್ಥಾಪಿಸಲಾಗಿದೆ.

5. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮತ್ತು ಪ್ರಾಥಮಿಕ ವ್ಯವಸಾಯ ಸಹಕಾರ ಸಂಘಗಳು ಕ್ರಮವಾಗಿ ಎಷ್ಟಿವೆ?

ಅ) 21 ಮತ್ತು 3500

ಆ) 20 ಮತ್ತು 4860

ಇ) 21 ಮತ್ತು 5051

ಈ) 30 ಮತ್ತು 5001

21 ಮತ್ತು 5051

6. ಯಾವುದೇ ಮಗು ಸತತವಾಗಿ ಎಷ್ಟು ದಿವಸ ಶಾಲೆಗೆ ಹೋಗದಿದ್ದರೆ ಶಾಲೆಯಿಂದ ಹೊರಗುಳಿದಿದೆ ಎಂದು ಪರಿಗಣಿಸಲಾಗುವುದು?

ಅ) 60 ದಿವಸ

ಆ) 07 ದಿವಸ

ಇ) 54 ದಿವಸ

ಈ) 63 ದಿವಸ

07 ದಿವಸ

7. ಜನನಿ ಸುರಕ್ಷಾ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I) ಶಿಶು ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಗೊಳಿಸುವುದು

II) ಸಾಂಸ್ಥಿಕ ಹೆರಿಗೆಯನ್ನು ಪ್ರೇರೆಪಿಸುವುದು

III) ಗರ್ಭಿಣಿ ಸ್ತ್ರೀಯರಿಗೆ ವಿಮಾ ಯೋಜನೆ ಕಲ್ಪಿಸುವುದು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

I & II

www.karunaduexams.com

ಜನನಿ ಸುರಕ್ಷಾ ಯೋಜನೆಯನ್ನು ಶಿಶು ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಗೊಳಿಸಲು ಮತ್ತು ಸಾಂಸ್ಥಿಕ ಹೆರಿಗೆಯನ್ನು ಪ್ರೇರೆಪಿಸಲು ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಮನೆಯಲ್ಲಿ ಹೆರಿಗೆಯಾದರೆ ರೂ 500, ಗ್ರಾಮೀಣ ಭಾಗದಲ್ಲಿ ಹೆರಿಗೆಯಾದರೆ ರೂ 700 ಮತ್ತು ನಗರ ಪ್ರದೇಶದಲ್ಲಿ ಹೆರಿಗೆಯಾದರೆ ರೂ 500 ನೀಡಲಾಗುವುದು.

8. ರಾಜ್ಯ ಸರ್ಕಾರದ "ನಗು-ಮಗು" ಯೋಜನೆಗೆ ಸಂಬಂಧಿಸಿದಂತೆ ಯಾವ ಹೇಳಿಕೆಗಳು ಸರಿಯಾಗಿವೆ?

I) ನಗು-ಮಗು ಯೋಜನೆಯನ್ನು 05-02-2014 ರಂದು ಜಾರಿಗೆ ತರಲಾಗಿದೆ

II) ಈ ಕಾರ್ಯಕ್ರಮದಡಿ ವಾಹನಗಳನ್ನು ಬಾಣಂತಿ ಮತ್ತು ನವಜಾತ ಶಿಶುವನ್ನು ಆಸ್ಪತ್ರೆಯಿಂದ ಮನೆಗೆ ತಲುಪಿಸಲು ಬಳಸಲಾಗುವುದು

III) ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಈ ಸೇವೆಯನ್ನು ಸರ್ಕಾರ ಕಲ್ಪಿಸಿದೆ

ಸರಿಯಾದ ಉತ್ತರವನ್ನು ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ:

ಅ) I & II

ಆ) II & III

ಇ) I & III

ಈ) I, II & III

I & II

ಈ ಕಾರ್ಯಕ್ರಮ ಕೇವಲ ಸರ್ಕಾರಿ ಆಸ್ಪತ್ರೆಯಲ್ಲಿ ಮಾತ್ರ ಜಾರಿಯಲ್ಲಿದೆ.

9. ಪ್ರಸೂತಿ ಆರೋಗ್ಯ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರಿಗೆ ಪೋಷಕಾಂಶ ನೆರವು ಪಡೆಯಲು ರೂ ______ ಅನ್ನು ನೀಡಲಾಗುತ್ತದೆ?

ಅ) ರೂ 500

ಆ) ರೂ 1000

ಇ) ರೂ 1500

ಈ) ರೂ 2000

ರೂ 2000

10. ಕಾನ್ಫರೆನ್ಸ್ ಕರೆಗಳ ಮೂಲಕ ಗರ್ಭಿಣಿ ಮಹಿಳೆಯರು ಮತ್ತು ಮಗುವಿನ ಆರೋಗ್ಯವನ್ನು ಅನುಸರಣೆ ಮಾಡಲು ರಾಜ್ಯದಲ್ಲಿ ಈ ಕೆಳಗಿನ ಯಾವ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ?

ಅ) ಶಿಶು ವಾಣಿ

ಆ) ವಾತ್ಸಲ್ಯ ವಾಣಿ

www.karunaduexams.com

ಇ) ತಾಯಿ ಧ್ವನಿ

ಈ) ಮಾತೃ ಧ್ವನಿ

ವಾತ್ಸಲ್ಯ ವಾಣಿ

www.karunaduexams.com